ಉತ್ತರ

1. ಇಂಜಿನಿಯರಿಂಗ್ - 17993

   ವೈದ್ಯಕೀಯ - 1423

   ದಂತ ವೈದ್ಯಕೀಯ - 923

2. ಇಲ್ಲ.

3. ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಪ್ರಾದೇಶಿಕ ಕಛೇರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1128(161)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಕಛೇರಿ ಎಲ್ಲಿದೆ?

ಆ) ಇದರ ಅಧೀನದಲ್ಲಿ ಎಷ್ಟು ಕಾಲೇಜುಗಳು ಬರುತ್ತವೆ?

ಇ) ಈ ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರ 2001-2002ನೇ ಸಾಲಿನಲ್ಲಿ ನೀಡಲಿರುವ ಅನುದಾನವೆಷ್ಟು?

ಈ) ಇದರ ಪ್ರಾದೇಶಿಕ ಕಛೇರಿಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ತೆರೆಯಲಾಗಿದೆಯೇ?

ಉ) ಇಲ್ಲದಿದ್ದಲ್ಲಿ, ಯಾವ ಯಾವ ಜಾಗದಲ್ಲಿ ಈ ವಿಶ್ವವಿದ್ಯಾಲಯದ ಪ್ರಾದೇಶಿಕ ಕಛೇರಿಯನ್ನು ತೆರೆಯಲಾಗುವುದು?

ಉತ್ತರ

ಅ) ಬೆಳಗಾಂ.

ಆ) 102.

ಇ) ಹತ್ತು ಲಕ್ಷ ರೂ.ಗಳು.

ಈ) ಹೌದು, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ;

ಉ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1129(166)

ಸದಸ್ಯರ ಹೆಸರು: ಶ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಡೀಮ್ಡ್ ಯೂನಿವರ್ಸಿಟಿ ಎಂದು ಪರಿಗಣಿಸಲು ಮಾನದಂಡವೇನು?

ಇ) ರಾಜ್ಯದಲ್ಲಿ ಇತರ ಶಿಕ್ಷಣ ಸಂಸ್ಥೆಗಳು ಹಲವಾರು ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದು, ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ?

ಈ) ಹಾಗಿದ್ದಲ್ಲಿ; ಅವುಗಳ ವಿವರ ನೀಡುವುದು?

ಉ) ಡೀಮ್ಡ್ ಯೂನಿವರ್ಸಿಟಿ ಎಂದು ಕೇಂದ್ರ ಸರ್ಕಾರ ಆದೇಶ ನೀಡಬೇಕಾಗಿದೆ ಎಂಬುದು ನಿಜವಲ್ಲವೇ?

ಊ) ಹಾಗಿದ್ದಲ್ಲಿ, ಯಾವ-ಯಾವ ಶಿಕ್ಷಣ ಸಂಸ್ಥೆ : ಕಾಲೇಜುಗಳನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸಬೇಕೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ?